ಆಯೋಗವನ್ನು ಕನ್ನಡೀಕರಿಸುವುದು. ಕನ್ನಡಿಗರ ಬಗ್ಗೆ, ಕನ್ನಡದ ಬಗ್ಗೆ ಈ ಸೇವಾ ಆಯೋಗ ಲಕ್ಷ್ಯ ಕೊಡುವವರೆಗೆ ಆಡಳಿತದಲ್ಲಿ ಕನ್ನಡ ಪರಿಣಾಮ ಕಾರಿಯಾಗುವುದಿಲ್ಲ.

ಸಾಮಾನ್ಯವಾಗಿ ಇಂಥ ವಿಷಯಗಳಲ್ಲಿ ಕನ್ನಡದ ಮಾತು ಬಂದಾಗ ರಾಜ್ಯಾಂಗವನ್ನು ಉಲ್ಲೇಖಿಸಲಾಗುತ್ತದೆ; ಅಲ್ಪಸಂಖ್ಯಾತರ ಹಕ್ಕುಗಳ ಬಗೆಗೆ ಹೇಳಲಾಗುತ್ತದೆ; ಭಾವೈಕ್ಯದ ಪ್ರಸ್ತಾಪ ಮಾಡಲಾಗುತ್ತದೆ; ಕನ್ನಡಿಗರ ಔದಾರ್ಯದ ಗುಣಗಾನ ಮಾಡಲಾಗುತ್ತದೆ. ಇಷ್ಟರಿಂದಲೇ ಕನ್ನಡಿಗರು ತಮ್ಮ ನೆಲದಲ್ಲಿಯೇ ಅನಾಥರಾಗುತ್ತಿದ್ದಾರೆ. ಅಲ್ಪ ಸಂಖ್ಯಾತರಾಗುತ್ತಿದ್ದಾರೆ. ರಾಜ್ಯಾಂಗ, ಅಲ್ಪ ಸಂಖ್ಯಾತರ ಹಕ್ಕುಗಳು ಕರ್ನಾಟಕಕ್ಕೆ ಮಾತ್ರ ವಿಶೇಷವಾದುದಲ್ಲ ತಾನೆ? ಹಾಗಾದರೆ ಕರ್ನಾಟಕದಲ್ಲಿ ಕನ್ನಡಿಗರಿಗೆ ಏಕೆ ಅನ್ಯಾಯ ಆಗುತ್ತಿದೆ?

**'ಮಣ್ಣಿನ ಮಕ್ಕಳಿಗೆ ಆದ್ಯತೆ ಎನ್ನಲು ಇವರಿಗೆ (ಅಧಿಕಾರಸ್ಥರಿಗೆ) ದಿಲ್ಲಿಯ ಭಯ; ಕನ್ನಡ ಎನ್ನಲು ಕೇಂದ್ರದ ಭಯ; ನಾವು ಸಮ ನಿಮಗೆ ಎನ್ನಲು ಅಧಿಕಾರ ಕಳೆದುಕೊಳ್ಳುವ ಭಯ'**

ಈ ಪ್ರಶ್ನೆಗಳಿಗೆ ಉತ್ತರ, ಕನ್ನಡಿಗರ ನಿರಾಸಕ್ತಿ, ನಿರಭಿಮಾನ! ಮಂತ್ರಿಮಂಡಲದಲ್ಲಿರುವವರು ಕನ್ನಡಿಗರು; ಶಾಸನ ಸಭೆಗಳಲ್ಲಿರುವವರು ಕನ್ನಡಿಗರು; ಸಾರ್ವಜನಿಕ ಸೇವಾ ಆಯೋಗದ ಮಂದಿ ಕನ್ನಡಿಗರು. ಆದರೂ ಕನ್ನಡ ನರಳುತ್ತದೆ; ಕನ್ನಡಿಗರ ಹಿತ ಕರಗುತ್ತಿದೆ. ಏಕೆಂದರೆ ಈ ಅಧಿಕಾರಸ್ಥರೂ ಯಾರಿಗೂ ಕನ್ನಡದ ಬಗೆಗೆ ಕಾಳಜಿ ಇಲ್ಲ. ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದಷ್ಟರಲ್ಲಿಯೇ ಅವರ ಆಸಕ್ತಿ. ಮಣ್ಣಿನ ಮಕ್ಕಳಿಗೆ ಆದ್ಯತೆ ಎನ್ನಲು ಇವರಿಗೆ ದಿಲ್ಲಿಯ ಭಯ; ಕನ್ನಡ ಎನ್ನಲು ಕೇಂದ್ರದ ಭಯ; ನಾವು ಸಮ ನಿಮಗೆ ಎನ್ನಲು ಅಧಿಕಾರ ಕಳೆದುಕೊಳ್ಳುವ ಭಯ. ಸದಾಭಯಭೀತರಾದ ಜನರಿಂದ ಏನನ್ನು ನಿರೀಕ್ಷಿಸಬಹುದು? ಇದು ಅಧಿಕಾರದಲ್ಲಿರುವವರ ಮಾತಷ್ಟೇ ಅಲ್ಲ. ಸಾಮಾನ್ಯ ಕನ್ನಡಿಗರ ಮಾತೂ ಹೌದು. ಜನರು ಎಚ್ಚರರಾಗಿದ್ದರೆ, ತಮ್ಮ ಅಪೇಕ್ಷೆಗಳನ್ನು ಅಭಿವ್ಯಕ್ತಗೊಳಿಸುವ ಸಾಮರ್ಥ್ಯ ಪಡೆದಿದ್ದರೆ ಅಧಿಕಾರಸ್ಥರು ಯಾವಾಗಲೂ ನಿರ್ಲಕ್ಷ್ಯದಿಂದಿರಲು ಸಾಧ್ಯವಿಲ್ಲ. ಜನರಿಗೇ ಇದರಲ್ಲಿ ಆಸಕ್ತಿ ಇಲ್ಲವೆಂದು ತಿಳಿದಾಗ ಅಧಿಕಾರದ ಜನ ಸಹಜವಾಗಿ ಸುಮ್ಮನಾಗುತ್ತಾರೆ. ತಮಿಳರಿಗೆ, ಬಂಗಾಳಿಗಳಿಗೆ, ಮರಾಟಿಗರಿಗೆ ತಮ್ಮ ತಮ್ಮ ಭಾಷೆಗಳ ಬಗೆಗಿರುವ ಅಭಿಮಾನ, ತಮ್ಮ ತಮ್ಮ ಜನರ ಬಗೆಗಿರುವ ಪ್ರೀತಿ ಕನ್ನಡಿಗರಲ್ಲಿ ಇಲ್ಲದಿರುವುದೂ ಕನ್ನಡದ ದುಃಸ್ಥಿತಿಗೆ, ಅನಾಥಸ್ಥಿತಿಗೆ ಕಾರಣವಾಗಿದೆ. ಮರಾಟಿಗರು ಕನ್ನಡ ನಾಡಿನಲ್ಲಿ ನಡೆಸುವ ಹೋರಾಟವನ್ನು ಕನ್ನಡಿಗರು ಕನ್ನಡನಾಡಿನಲ್ಲಿ ನಡೆಸುವುದಕ್ಕೂ ಅಸಮರ್ಥರಾಗಿದ್ದಾರೆ. ಇದು ಕನ್ನಡಿಗರ ದೌರ್ಬಲ್ಯ. ಆದರೆ ಇದನ್ನು ಔದಾರ್ಯದ ಹೆಸರಿನಲ್ಲಿ ಮುಚ್ಚಿಕೊಳ್ಳಲಾಗಿದೆ. ಯಾವ ಪ್ರಕೃತಿಯ ಕೋಪಕ್ಕೂ ಒಳಗಾಗದೆ, ರಾಜರನ್ನೇ ಪ್ರತ್ಯಕ್ಷ ದೇವತೆ ಎಂದು ಭಾವಿಸಿ, ಎರಡುಹೊತ್ತಿನ ಊಟದಿಂದ ತೃಪ್ತರಾಗಿ, ಅನ್ಯರ ಆಡಳಿತಕ್ಕೆ ಸಮಾಧಾನ ಚಿತ್ತದಿಂದ ತಲೆಕೊಟ್ಟು, ಅಲ್ಪ ತೃಪ್ತರಾದ ಹಳೇ ಮೈಸೂರಿನ ಜನರ ಗುಣಲಕ್ಷಣಗಳು ಕನ್ನಡಿಗರ ಗುಣ ಲಕ್ಷಣಗಳೇ ಆಗಿ ಮಾರ್ಪಾಡು ಹೊಂದಿರುವುದು ಒಂದು ದುರಂತ.

ಕನ್ನಡದ ಸ್ಥಾನಮಾನದ ಬಗೆಗೆ ಯಾವಾಗಲೂ ಸರ್ಕಾರವನ್ನೇ ಆಕ್ಷೇಪಿಸುವುದು ಸರಿಯಲ್ಲ. ಕನ್ನಡ ಜನರಿಗೂ ಸೇರಿದ್ದು ಎಂಬುದನ್ನು ಮರೆಯುವಂತಿಲ್ಲ. ನಾವು ನಮ್ಮ ನಿತ್ಯಜೀವನದಲ್ಲಿ ಕನ್ನಡವನ್ನು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ತಂದಿದ್ದೇವೆ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ನಾವು